# ರಜೆಯ ಖುಷಿ



ವಿಜಯಕುಮಾರಿ

ಬಂತು ರಜೆಯು ತಂತು ಖುಷಿಯು
ಎಂಥ ಮಜವು ಮನಸಿಗೆ
ನಮ್ಮ ನಡೆಯು ಹಳ್ಳಿ ಕಡೆಗೆ
ತಡೆಯು ಇಲ್ಲ ಹರುಷಕೆ

ಬಿಸಿಲು ಸುಡದು ಆಟ ಬಿಡದು
ದಣಿವು ಸನಿಹ ಸುಳಿಯದು
ಗೆಳೆಯರೊಡನೆ ಆಡುತಿರಲು
ಸರಿದ ಸಮಯ ತಿಳಿಯದು

ಓದು ಬರಹ ಲೆಕ್ಕವೆನುವ
ಚಿಂತೆ ನಮಗೆ ಕಾಡದು
ಶಾಲೆಗ್ಹೋಗಿರೆಂದು ಗದರಿ
ಈಗ ಯಾರು ಹೇಳರು

ಹಳ್ಳಿಗಳಲಿ ಸಾಮರಸ್ಯ
ಬದುಕು ಬಹಳ ಚಂದವು
ಕಷ್ಟ ಸುಖಕೆ ಆಗುವಂಥ
ಜನರು ಹೃದಯವಂತರು

ಅಂಥ ಬದುಕು ಕಾಣುವಂಥ
ಭಾಗ್ಯ ನಮಗೆ ಒದಗಿದೆ
ದೇಶದೇಳ್ಗೆ ಹಳ್ಳಿಗಳಲಿ
ಎನುವ ಮಾತು ದಿಟವಿದೆ

ಅಜ್ಜ ಅಜ್ಜಿ ತೋರುತಿರುವ
ಪ್ರೀತಿ ಬಹಳ ದೊಡ್ಡದು
ಅವರು ಸಾಗಿ ಬಂದ ಬದುಕು
ಕಲಿಕೆಗೊಂದು ಪಥ್ಯವು

■ ಸೋಮಲಿಂಗ ಬೇಡರ

## ಕುಂಚ ಪ್ರಪಂಚ



**ನಿಯತಿ ನಾವಡ ಪಿ.**
2ನೇ ತರಗತಿ, ಶ್ರೀ ಸಿದ್ಧಿವಿನಾಯಕ
ರೆಸಿಡೆನ್ಸಿ ಸ್ಕೂಲ್
ಹಟ್ಟಿಯಂಗಡಿ, ಕುಂದಾಪುರ





**ಚೇತನಾ ಶೆಪ್ಪೂರ್**
ರಾಣೆಬೆನ್ನೂರು

